ಬರಿಸ್ಕೋಬೇಕು, ನಾಳೆ ನಾನು ಕೂಲಿ ಬರಲ್ಲ' ಎಂದು ಬಿರುಸಿನಿಂದಲೇ ನುಡಿದಳು ದ್ಯಾವಕ್ಕ.

'ಆಯ್ತು ಬಿಡವ್ವ, ನಿನ್ನಾಸೆನೂ ನಾಳೆ ತೀರಲಿ' ಎಂದು ರಾಮಣ್ಣ ಅವಳ ಕಡೆ ತಿರುಗಿಯೂ ನೋಡದೆ ಹೆಜ್ಜೆ ಹಾಕಿದ.

ರಾಮಣ್ಣನಿಗೆ ಅಂದದ್ದು ತುಸು ಬಿರುಸಾಯಿತೇನೋ, ಅವನು ಏನೆಂದುಕೊಂಡನೋ ಏನೋ... ಮತ್ತೆ ಕೂಲಿಗೆ ಅವರ ಕಪಿಲೆಗೇ ಹೋಗಬೇಕಲ್ಲ ಎಂದು ದ್ಯಾವಕ್ಕ ಮನದಲ್ಲೇ ನೊಂದುಕೊಂಡಳು. ರಾತ್ರಿ ಮನೆಗೆ ಬಂದ ಗಂಡನಿಗೆ ನಾಳೆ ಎಲ್ಲಿಗೂ ಹೋಗದಿರುವಂತೆಯೂ, ಗ್ರಾಮಸಭೆಗೆ ಬಂದು ಗೌರ್ಮೆಂಟ್ ಮನೆ ಕೇಳುವಂತೆಯೂ ತಾಕೀತು ಮಾಡುವ ಧಾಟಿಯಲ್ಲಿ ಒಂದೇ ಸಮನೆ ವದರಾಡಿದಳು. ಇದಕ್ಕೆ ಗಂಡನು ಮನೆ ಬೇಕು ಎಂದಾಗಲಿ, ಬೇಡ ಎಂದಾಗಲಿ ಯಾವುದನ್ನೂ ಹೇಳದೇ ಬರೀ ಮುಗುಂ ಆಗಿ ಊಂ... ಊಂ... ಎಂದು ಊಗುಡುತ್ತಾ ಹಾಗೆಯೇ ಚಾಪೆ ಮೇಲೆ ನಿದ್ದೆಗೆ ಜಾರಿದನು. ದ್ಯಾವಕ್ಕನ ಮನಸ್ಸಿನಲ್ಲಿ ಅವಳ ಕನಸಿನ 'ಸಿಮೆಂಟ್ ಶೀಟಿನ ಮನೆ' ಅವಳನ್ನೂ ಮೀರಿ ಬೆಳೆದು ನಿಂತಿತ್ತು.

ಮರುದಿನ ಗ್ರಾಮಸಭೆ ಶುರುವಾಗುವ ಹೊತ್ತಿಗೆ ದ್ಯಾವಕ್ಕನೂ ತನ್ನ ಮನದೊಳಗೆ ಕಟ್ಟಿಕೊಂಡ ಆಸೆಯ ಮೂಟೆಗೆ ರೆಕ್ಕೆಪುಕ್ಕ ಬಲಿಯುವ ಹೊತ್ತನ್ನ ಸಾಕ್ಷೀಭೂತಳಾಗಿ ಕಣ್ತುಂಬಿಕೊಳ್ಳುವ ಇರಾದೆಯೊಂದಿಗೆ ಹೊತ್ತಿಗೂ ಮುಂಚೆ ಊರ ಚಾವಡಿಯ ಹೊರಚ್ಚಿನಲ್ಲಿ ಬಂದು ಕಾಯುತ್ತಾ ಕುಳಿತಿದ್ದಳು. ಅಲ್ಲಿ ಜನ ಗುಂಪು ಸೇರಿ ಸಭೆ ಪ್ರಾರಂಭವಾದ ನಂತರದಲ್ಲಿ ಜನ ತರಾವರಿಯಾಗಿ ಮತನಾಡುತ್ತಿದ್ದುದರಿಂದಾಗಿ ಬಂದಿದ್ದ ಅಧಿಕಾರಿಗಳು ಏನು ಹೇಳುತ್ತಿದ್ದರು ಎಂಬುದೇ ಅರ್ಥವಾಗದೇ ಗೋಜು ಗೋಜಲಾಗಿತ್ತು. ಆ ಗುಂಪಿನಲ್ಲಿ ನಾಲ್ಕಾರು ಹೆಂಗಸರಿದ್ದು ಅವರ ಜೊತೆ ದ್ಯಾವಕ್ಕನೂ ಸೇರಿಕೊಂಡಿದ್ದಳು. ಜನರ ಸದ್ದಿನ ನಡುವೆಯೇ ದ್ಯಾವಕ್ಕ 'ಈ ಸಾರಿ ನನಗೆ ಗೌರ್ಮೆಂಟ್ ಮನೆ ಬೇಕು ಸಾ, ನನ್ನ ಹೆಸರು ದ್ಯಾವಮ್ಮ ಅಂತ ಬರ್ಕೊಳ್ಳಿ ಸಾ' ಎಂದು ಪದೇ ಪದೇ ಹೇಳುತ್ತಿದ್ದಳು. ಆಕೆಯ ದನಿಯನ್ನು ಯಾರೂ ಕೇಳಿಸಿಕೊಳ್ಳುತ್ತಲೇ ಇರಲಿಲ್ಲ.

ಅವರು, ಈ ವರ್ಷ ಆ ವಾರ್ಡಿಗೆ ಇಷ್ಟು, ಈ ವಾರ್ಡಿಗೆ ಕಳೆದ ಬಾರಿ ಒಂದು ಹೆಚ್ಚಿಗೆ ಕೊಡಲಾಗಿತ್ತು. ಈ ಸಾರಿ ಕಡಿಮೆ ಕೊಡಬೇಕು. ಜಾತಿವಾರು ಯಾರಿಗೆ ಎಷ್ಟು? ಈ ಸಲ ಗ್ರಾಮಪಂಚಾಯಿತಿ ಅಧ್ಯಕ್ಷರ ಮರ್ಜಿಗೆ ಇಂತಿಷ್ಟು ಮನೆಗಳನ್ನು ಕೊಡಬೇಕು ಎಂದು ಲೆಕ್ಕ ಹಾಕುವುದರಲ್ಲಿಯೇ ಮಗ್ನರಾಗಿದ್ದರು. ಅಷ್ಟರಲ್ಲಿ ಗುಂಪಿನ ನಡುವೆ ಯಾರೋ ಏನೋ ಮಾತು ಅಂದು ಅದು ದೊಡ್ಡ ಜಗಳಕ್ಕೆ ಕಾರಣವಾಯಿತು. ಜಗಳವು ಹೊಡೆದಾಟದ ಮಟ್ಟಕ್ಕೆ ಬೆಳೆದು ಸದಸ್ಯರು ಪರಸ್ಪರ ಕೈ ಕೈ ಮಿಲಾಯಿಸುವ ಹಂತ ತಲುಪಿತು. ಕೊನೆಯಲ್ಲಿ ಅಲ್ಲಿ ಸೇರಿದ್ದ ಊರಿನ ಪ್ರಮುಖರು, ಈಗ ಯಾರ ಯಾರಿಗೆ ಮನೆ ಬೇಕೋ ಎಲ್ಲರ ಹೆಸರುಗಳನ್ನು ಬರೆದುಕೊಳ್ಳುವಂತೆಯೂ, ಆ ನಂತರ ಪರಿಶೀಲಿಸಿ ಅರ್ಹರನ್ನು ಪಟ್ಟಿ ಮಾಡಿ ಅಂತಿಮಗೊಳಿಸಿ ಎಂದು ಅಧಿಕಾರಿಗಳಿಗೆ ಹೇಳಿ, ಅಧಿಕಾರಿಗಳನ್ನು ಕೇವಲ ಮೂಕಪ್ರೇಕ್ಷಕರಾಗಿ ಇರುವಂತೆ ಮಾಡಿದರು. ಫಲಾನುಭವಿಗಳ ಹೆಸರುಗಳನ್ನು ಅಂತಿಮಗೊಳಿಸದೇ ಮುಗುಮ್ಮಾಗಿ ಗ್ರಾಮಸಭೆಯನ್ನು ಮುಗಿಸಿದರು. ಸಭೆಯಲ್ಲಿ ಕೊನೆಯದಾಗಿ ಹೆಸರನ್ನು ಬರೆದುಕೊಂಡಿರುವ ಪಟ್ಟಿಯಲ್ಲಿ ದ್ಯಾವಕ್ಕನ ಹೆಸರನ್ನು

